# ರೈನೋ ರಕ್ಷಣೆಗೆ ಬಲ

## ಅಭಯಾರಣ್ಯದ ರಕ್ಷಣೆಗೆ ನಿಂತ ನ್ಯಾಯಾಲಯ



**ಅವಸಾನದ ಅಂಚಿನಲ್ಲಿರುವ ಒಂಟಿಕೊಂಬಿನ ಘೇಂಡಾಮೃಗಗಳಿಗೆ ನೆಲೆಯಾಗಿರುವ ಅಸ್ಸಾಂನ ಪೊಬಿಟೋರ ಅಭಯಾರಣ್ಯಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ನಿರ್ಣಯ, ರೈನೋಗಳ ರಕ್ಷಣೆಗೆ ಶಕ್ತಿ ತುಂಬಿದೆ.**

■ ಗುರುರಾಜ್ ಎಸ್. ದಾವಣಗೆರೆ

ಅಸ್ಸಾಂ ರಾಜ್ಯದ ಪೊಬಿಟೋರ ಅಭಯಾರಣ್ಯ ಮತ್ತೆ ಸುದ್ದಿಯಲ್ಲಿದೆ. ದೇಶದಲ್ಲಿ ಅತಿ ಹೆಚ್ಚು ಒಂಟಿ ಕೊಂಬಿನ ಘೇಂಡಾಮೃಗಗಳ ಆವಾಸವೆನಿಸಿರುವ ಈ ಅಭಯಾರಣ್ಯದ ರಕ್ಷಣೆಗೆ ಸ್ವತಃ ದೇಶದ ಸರ್ವೋಚ್ಚ ನ್ಯಾಯಾಲಯವೇ ಕ್ರಮ ತೆಗೆದುಕೊಂಡಿದೆ. ಈಗಾಗಲೇ ಅಳಿವಿನಂಚಿಗೆ ಸರಿದಿರುವ ಅಪರೂಪದ ಘೇಂಡಾಮೃಗಗಳ ಪಾಲಿಗೆ ದೊಡ್ಡ ಗಂಡಾಂತರವನ್ನೇ ಸೃಷ್ಟಿಸಲಿದ್ದ ಅಸ್ಸಾಂ ರಾಜ್ಯ ಸರ್ಕಾರದ ನಿರ್ಣಯವೊಂದನ್ನು ತಡೆಹಿಡಿದಿರುವ ಸರ್ವೋಚ್ಚ ನ್ಯಾಯಾಲಯ, ಪರಿಸರಪ್ರಿಯರಲ್ಲಿ ಆತ್ಮವಿಶ್ವಾಸ ತುಂಬಿದೆ.

### ಏನಿದು ಪ್ರಕರಣ?

1998ರಲ್ಲಿ ರಾಜ್ಯ ಅರಣ್ಯ ಇಲಾಖೆಯು ಪೊಬಿಟೋರ ಅರಣ್ಯ ಪ್ರದೇಶವನ್ನು ಅಭಯಾರಣ್ಯ ಎಂದು ಘೋಷಿಸಿತ್ತು. ಆದರೆ ಕಂದಾಯ ಇಲಾಖೆಯನ್ನು ಸಂಪರ್ಕಿಸದೇ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು 25 ವರ್ಷಗಳ ನಂತರ ನೆನಪಿಸಿಕೊಂಡ ಈಗಿನ ರಾಜ್ಯ ಸರ್ಕಾರ, ಇದೇ ಮಾರ್ಚ್ 10ರಂದು ಅರಣ್ಯ ಇಲಾಖೆಯ ತೀರ್ಮಾನ ಏಕಪಕ್ಷೀಯವಾಗಿರುವುದರಿಂದ ಅದನ್ನು ರದ್ದು ಮಾಡುವ ತೀರ್ಮಾನ ಕೈಗೊಂಡು ಆದೇಶ ಹೊರಡಿಸಿತು.

> ವಿಶ್ವದ ವನ್ಯದಲ್ಲಿ ಆಫ್ರಿಕಾದ ಡೈ ಸೆರಾಸ್ ಬೈಕಾರ್ನೆಸ್ (ಕಪ್ಪು), ಸೆರಟೋ ತೀರಿಯಂ ಸೈಮಸ್ (ಬಿಳಿ) ಅಸ್ಸಾಂನ ರೈನಾಸರಸ್ ಯುನಿಕಾರ್ನೆಸ್, ಜಾವದ ರೈನಾಸರ ಸೊಂಡೆಕಸ್ ಮತ್ತು ಸುಮಾತ್ರಾದ ಡೈಡರ್ಮೋ ಸೆರಾಸ್ ಸುಮಾತ್ರೆನ್ಸೆಸ್ ಎಂಬ ಐದು ಪ್ರಭೇದಗಳ ಘೇಂಡಾಮೃಗಗಳಿವೆ.

> ಏಷ್ಯಾ ಭಾಗದ ಘೇಂಡಾಮೃಗಗಳು ಅತ್ಯುತ್ತಮವಾಗಿ ಈಜುತ್ತವೆ. ಆಫ್ರಿಕಾದ ಘೇಂಡಾಮೃಗಗಳಿಗೆ ಸಮರ್ಥವಾಗಿ ಈಜು ಬರುವುದಿಲ್ಲ.

ಸಭೆ ಸೇರಿ ಠರಾವು ಪಾಸು ಮಾಡಿದ ಮಂತ್ರಿಮಂಡಲ, ಅಭಯಾರಣ್ಯ ಘೋಷಣೆಯಂಥ ಪ್ರಮುಖ ನಿರ್ಧಾರ ಮಾಡುವಾಗ ಅಂದಿನ ಮುಖ್ಯಮಂತ್ರಿಯವರನ್ನೇ ಅರಣ್ಯ ಇಲಾಖೆ ಸಂಪರ್ಕಿಸಿರಲಿಲ್ಲ ಎಂಬ ಕಾರಣ ನೀಡಿ ಅಭಯಾರಣ್ಯದ ಆದೇಶ ಹಿಂತೆಗೆದುಕೊಳ್ಳಲಾಗುತ್ತಿದೆ ಎಂಬ ಸಮಜಾಯಿಷಿ ನೀಡಿತು.

ತೆಂಗಭಂಗ, ಮರ್ಕಟ ಮತ್ತು ಮಯಂಗ ಬುಡಕಟ್ಟಿನ ಜನ ಸ್ವಾತಂತ್ರ ಪೂರ್ವದಿಂದಲೂ ಇದೇ ಕಾಡಿನಲ್ಲಿ ನೆಲೆಸಿದ್ದಾರೆ, ಅವರ ಪುನರ್ವಸತಿ ಸಮರ್ಪಕವಾಗಿ ಆಗಿಲ್ಲ. ಸರಿಯಾದ ಪರಿಹಾರ

> ಆಫ್ರಿಕಾ ಮತ್ತು ಸುಮಾತ್ರಾದ ರೈನೋಗಳಿಗೆ ಮೂಗಿನ ಮೇಲೆ ಒಂದರ ಹಿಂದೆ ಇನ್ನೊಂದರಂತೆ ಎರಡು ಕೊಂಬುಗಳಿರುತ್ತವೆ. ಜಾವಾ ಪ್ರಭೇದಗಳಲ್ಲಿ ಒಂದು ಕೊಂಬು ಇರುತ್ತದೆ.

ನೀಡದೆ ಅಭಯಾರಣ್ಯದ ಘೋಷಣೆಯಾಗಿದೆ ಮತ್ತು ಅಭಯಾರಣ್ಯದ ಹೆಸರಿನಲ್ಲಿ ಆದಿವಾಸಿಗಳ ಹಕ್ಕಿನ ಉಲ್ಲಂಘನೆಯಾಗಿದೆ. ಅದನ್ನು ಸರಿಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರ ಹೇಳಿದೆ.

ಆತುರಾತುರವಾಗಿ ಹಳೆಯ ಆದೇಶವನ್ನು ಹಿಂಪಡೆದಿರುವ ಸರ್ಕಾರವು ಆದಿವಾಸಿಗಳ ಹಕ್ಕು ಮತ್ತು ಬೇಡಿಕೆ ಈಡೇರಿಸಲು ಪ್ರತ್ಯೇಕ ಸಮಿತಿ ರಚಿಸಿ ಜೊತೆಗೆ ಪೊಬಿಟೋರ ಅರಣ್ಯ ಪ್ರದೇಶವನ್ನು ಮತ್ತೊಮ್ಮೆ ಅಭಯಾರಣ್ಯವೆಂದು ಘೋಷಿಸುವ ಜವಾಬ್ದಾರಿಯನ್ನು ಸಮಿತಿಗೆ ವಹಿಸಿ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಆದೇಶ ನೀಡಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ನ್ಯಾಯಾಲಯ, 'ಆದಿವಾಸಿಗಳ ಹಕ್ಕು ರಕ್ಷಣೆ ಮತ್ತು ಬೇಡಿಕೆ ಪೂರೈಕೆಗೆ ನಿಮ್ಮ ಡಿನೋಟಿಫಿಕೇಶನ್ ಉತ್ತರವಲ್ಲ. ಇದನ್ನು ನಾವು ಒಪ್ಪುವುದಿಲ್ಲ' ಎಂದಿದೆ. ಜೊತೆಗೆ ಅಭಯಾರಣ್ಯದ ಹಳೆಯ ಆದೇಶವನ್ನು ರದ್ದು ಮಾಡಲು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮತಿ ಬೇಕೆಂಬ ಕನಿಷ್ಠ ತಿಳಿವಳಿಕೆ ರಾಜ್ಯ ಸರ್ಕಾರಕ್ಕೆ ಇಲ್ಲವೇ ಎಂದು ಪ್ರಶ್ನಿಸಿದೆ. ಸರ್ಕಾರದ ಈ ನಿರ್ಧಾರ ಕಾನೂನುಬಾಹಿರ ಎಂದು ಮೇಲ್ನೋಟಕ್ಕೆ ತಿಳಿಯುತ್ತದೆ. ದೇಶದ ಯಾವುದೇ ಅರಣ್ಯ, ಅಭಯಾರಣ್ಯ ಅಥವಾ ರಾಷ್ಟ್ರೀಯ